Regd No. M 1299 SATYAVADI Founded1917

# ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ಪಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟಿದು)

ಸಂಪುಟ 31 ಸಂಚಿಕೆ 29 ] ತಾ.ಕ್ರವಾಡ 31—10—47 [ ಬಿಡಿ ಪ್ರತಿ 3½ ಪೈ

## ಮುಸ್ಲಿಂ ಸಂಸ್ಥೆ ನೇರ ಕಾರ್ಯಾಚರಣೆ ಹೂಡುವುದೇ ?

ಹೈದರಾಬಾದು ಅ 28.... ಬಿ ರಂ ಗಾಬಾದಿನಲ್ಲಿ 15 ಸಾವಿರ ಮುಸ್ಲಿಮರು ಮೆರವಣಿಗೆ ಮಾಡಿ ಹೈದರಾಬಾದು ಸ್ವತಂತ್ರವಾಗಿರಬೇಕೆಂದರು. ಡೊಮಿನಿಯನ್ನಿಗೆ ಸೇರಿದರೆ ಸೇರ ಕಾರ್ಯಾಚರಣೆಯನ್ನು ಕೈಗೊಳ್ಳುವುದಾಗಿ ತಿಳಿಸಿದರು.

## ರಷಿಯನ್ನರು ೧೫ ದಿವಸಗಳಲ್ಲಿ ದೆಹಲಿ ತಲಪುವರು

ಲಂಡನ್ ಅ 28.... ಏವಾನ ನಾಯಕ ಹಾರ್ಮೆ ಈ ದಿವಸ ಕಾವ-ನ್ಸು ಸಭೆಯಲ್ಲಿ ಭಾಷಣ ಮಾಡುತ್ತಾ, ಪಾಕಿಸ್ತಾನದಲ್ಲಿ ಗೂಂಡಾರಾಜ್ಯವೇ ಇದೆ. ರಷ್ಯಾ ಇನ್ನು 15 ದಿವಸಗಳಲ್ಲಿ ದೆಹಲಿ ತಲಪುವದು ಎಂದು ಜಿನ್ನರು ಹೇಳಿದರೆಂದು ತಿಳಿಸಿದರು.

## ವಜ್ರ ವಾಪಸು ಮಾಡಿ

ಲಂಡನ್ ಅ 28— ನಾಜಿಗಳು ಲೂಟಿ ಮಾಡಿದ್ದ ವಜ್ರಗಳನ್ನು ವಾಪಸ್ಸು ಮಾಡಬೇಕೆಂದು ಪೋಲಂಡು ಕೇಳಿದೆ

## ಹೋಟೆಲು ಮಾಲೀಕರಿಗೆ ಎಚ್ಚರಿಕೆ

ಮಧುರಾ— ಉಪಹಾರ ಗೃಹಗಳ ಕುಸಗಾರರು ಬೀಡಿಕೆಗಳನ್ನು ಈಡೇರಿಸದಿದ್ದಲ್ಲಿ ಮುಷ್ಕರ ಹೂಡುವುದಾಗಿ ಮಾಲೀಕರ ಸಂಘಕ್ಕೆ ಪ್ರಕಟಣೆ ಇತ್ತಿದ್ದಾರೆ

## ಭಾರತದ ದೊಂಬಿಗಳಿಗೆ ಜವಾಬ್ದಾರ ನಾನಲ್ಲ —

ಹೀಗೆಂದು ಅಲ್ಲಿ ಪ್ರಧಾನರು ಕಾಮನ್ಸು ಸಭೆಯಲ್ಲಿ ತಿಳಿಸಿದರು..

### ಕಾಲೇಜು ವಾರ್ಷಿಕೋತ್ಸವ

ಮದರಾಸಿಲಯು ಅ 29

ಜಗದ್ಗುರು ಶ್ರೀ ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠದ ಶ್ರೀ ಮತ್ಸ್ಯಯಮೊಂದ್ರ ತೀರ್ಥಶ್ರೀಗಳವರ ಮಾನ್ಯ ನೇತೃತ್ವದಲ್ಲಿ ಶ್ರೀ ಗುರು ಸಾರ್ವಭೌಮ ಸಂಸ್ಕೃತ ಕಾಲೇಜಿನ ವಾರ್ಷಿಕೋತ್ಸವವು ವಿಜೃಂಭಣೆಯಿಂದ ನಡೆಯಿತು. ತಾ || 24 ರಲ್ಲಿ ವಾರ್ಷಿಕ ವರದಿಯನ್ನು ಕಾಲೇಜಿನ ಪ್ರಿನ್ಸಿಪಾಲರು ಶ್ರೀಗಳವರಲ್ಲಿ ಓದಿ ಅರ್ಪಿಸಿದರು. ತಾ || 26 ರಲ್ಲಿ ಹರಿಕಥೆ ಮತ್ತು ಸಂಸ್ಕೃತ ಭಾಷಣಗಳಾದವು. ತಾ || 27 ರಲ್ಲಿ ಭಾರವಾಡದ ಕನ್ನಡ ರಿಸರ್ವಿನ ಡೈರೆಕ್ಟರು ಶ್ರೀ ಪಂಚಮುಖಿ ಯವರ ಉಪನ್ಯಾಸವಾಯಿತು. ರಾತ್ರಿ ಕವಿಸಾರ್ವಭೌಮ ಶಿಖಾಮಣಿ ಶ್ರೀಮತ್ಸುಧೀಂದ್ರತೀರ್ಥ ಶ್ರೀಪಾದಂಗಳವರಿಂದ (ಶ್ರೀ ರಾಯರ ಗುರುಗಳು) ರಚಿತವಾದ ಸುಭದ್ರಾ ಪರಿಣಯ (ಸಂಸ್ಕೃತ) ನಾಟಕವನ್ನು ವಿದ್ಯಾರ್ಥಿಗಳು ಅಭಿನಯಿಸಿದರು. ಶ್ರೀ ರಾಜಾ ಎಸ್. ಗುಂಡಾಚಾರ್ಯ (ಅರ್ಜುನ) ಕುಮಾರಿ ಸುಶೀಲೆಂದ್ರಾಚಾರ್ಯ (ಸುಭದ್ರಾ) ರಿಕ್ಕಿ ವೆಂಕಣ್ಣಾಚಾರ್ಯ (ವಿದೂಷಕ) ಗುಂಜಳ್ಳಿ ವಾದೀಂದ್ರಾಚಾರ್ಯ (ಬಲರಾಮ) ಇವರುಗಳ ಅಭಿನಯವು ಅತ್ಯುತ್ತಮವಾಗಿತ್ತು. ನಾಟಕಾನಂತರ ಕಾಲೇಜು ಪ್ರಿನ್ಸಿಪಾಲರು ಉಪಸಂಹಾರ ಭಾಷಣ ಮಾಡಿದನ್ನೇಲೆ ಕಾರ್ಯಕ್ರಮ ಮುಕ್ತಾಯವಾಯ್ತು.

ವಿಜಯೋತ್ಸವದ ಸಂತೋಷಾರ್ಥವಾಗಿ ನಾಳೆ ಸಮಸ್ತ ಆಫೀಸಿಗೆ ರಜಾ. ಮ್ಯಾ.

## ಸುದ್ದಿಗಳು

ಇಸ್ಕಂಬಾಲ್ ಅ 28— ಪಾಕೀ ಸ್ಥಾನದಲ್ಲಿ ಕಮ್ಯುನಿಜಂ ಬುಡವೂರಲಾರದೆಂದು ಫಿರೋಜಖಾನ್ ನೂನರು ಹೇಳಿದ್ದಾರೆ.

೦ ೦

ಲಂಡನ್ ಅ 68— ಸಾರ್ವಜನಿಕೆ ನಿಧಿಯಿಂದ ರಾಜಕುಮಾರಿ ವಿವಾಹದಲ್ಲಿ 60 ಸಾವಿರ ರೂ. ವೆಚ್ಚಮಾಡಲಾಗುವುದು.

೦ ೦

ಮಧುರಾ— ಕಾಲರಾ ಪ್ರಯುಕ್ತ ವೈಗಾಲ್ ನದಿಯಲ್ಲಿ ಒಟ್ಟೆ ಒಗೆಯು ಕೂಡದೆಂದು ಸರ್ಕಾರಿ ಆಜ್ಞೆ ಆದ ಕಾರ್ಯಾಗಿ ಆಗಸರ ಮುಸ್ಕರ.

೦ ೦

ಮೈಸೂರು ರಾಜ್ಯಾಂಗ ರಚನಾ ಸಭೆಯ ಅಧ್ಯಕ್ಷ ಸ್ಥಾನವು ಪ್ರಜಾಪಕ್ಷದ ನಾಯಕರಾದ ಶ್ರೀ ಗುರುಪಾದಪ್ಪನವರಿಗೆ ದೊರೆಯಬಹುದೆಂದು ಹೇಳಲಾಗಿದೆ.

೦ ೦

ರಾಜಕೋಟೆ ಅ 23— ಭಾರತ ಸ್ವಾತಂತ್ರ್ಯ ಕಾನೂನಿನ ಮೇರೆ, ಡೊಮಿನಿಯನ್ನಿಗೆ ಸೇರಲಿಚ್ಛಯಿಸುವ ರಾಜರು ಪ್ರಜೆಗಳೊಡನೆ ಸರಿತೀಲನೆ ಮಾಡುವುದು ಅನಗತ್ಯವೆಂದು ಕಠಾವಾಡಿಯಲ್ಲಿರುವ ಜುನಘಢ ರಾಜರು ಧರಾಂಗಧರಾಜರಿಗೆ ಬರೆದಿದ್ದಾರೆ

೦ ೦

ಪುದುಕೋಟೆ ಅ 23— ಮಹಾ ರಾಜರು ವಿಜಯದಶಮಿ ದಿನದ ಬಾಣ ಬಿಡುವ ಮಹೋತ್ಸವದಲ್ಲಿ ಆ ಬಾಣ 7 ವರ್ಷದ ಬಾಲಕನಿಗೆ ತಗುಲಿ ತೀವ್ರ ಗಾಯವಾಗಿದೆ.

೦ ೦

ಬೆಂಗಳೂರು ಅ 27— ಸಪ್ಟೆಂಬರ್ ತಾ || 25 ರಲ್ಲಿ ಪಂ || ನೆಹರೂ ವರ್ಧಂತಿ ಆ ಸುಧಿನದಲ್ಲಿ ಪ್ರಭುಗಳು ಹರಿಜನ ದೇವಾಲಯ ಪ್ರವೇಶವನ್ನು ಘೋಷಿಸಬೇಕು ಎಂದು ಕೊಗೇರಿಯಿಂದ ಸಲಹೆ ಹೊಂಟಿದೆ.

೦ ೦

ಸ್ಟೇಟು ಕಾಂಗ್ರೆಸ್ಸು ಆದೇಶಾನುಸಾರ ಗದ್ವಾಲು ಸಂಸ್ಥಾನದ ಮಾಲೀಕ ಜಟೀಲ್ ಪೋಲೀಸುಪಟೇಲ್ ಪಟ್ವಾರಿ ಮೊದಲಾದವರು ತಮ್ಮ ಪದವಿಗಳಿಗೆ ರಾಜೀನಾಮೆ ಕಳುಹಿಸಿದ್ದಾರೆ.

# ಮಾದರಿಯ ಮೈಸೂರು

ಮಾದರಿಯ ಮೈಸೂರಿನಲ್ಲಿ ಇದೀಗ ಮಹಾರಣ ಯಜ್ಞ ಕೊನೆಗೊಂಡು ಶಾಂತಿಯ ಕಿರಣಗಳು ಕಾಣಿಸಿವೆ. ಮೈಸೂರಿನ ಪ್ರಜಾ ಚಳವಳಿಕ್ಕೆ ಜಯ ದೊರಕಿತು. ಆ ಜಯಕ್ಕೆ ಅವರು ಅರ್ಹರು. ಅವರು ಅನುಭವಿಸಿದ ಬಣ್ಣಬವಣೆಗಳು ವ್ಯರ್ಥವಾಗಲಿಲ್ಲ. ಅವರ ಸತ್ಯಾಗ್ರಹ ಬಿನಲ್ಲುದುರೆಯಾಗಲಿಲ್ಲ ಅವರು ಹೂಡಿದ ನ್ಯಾಯವಾದ ಚಳವಳಿಕ್ಕೆ ಜಯವು ದೊರಕಿತು. ಮೈಸೂರಿನ ಹೆಮ್ಮೆಯು ನಾಡು ಹಬ್ಬ ದಸರಾ ಸಂಭವಿಸುವುದಕ್ಕೆ ಮೊದಲೇ ಶಾಂತಿಯ ಚಿಹ್ನೆಗಳು ಮೂಡಿದುದು ಒಳಿತಾಯಿತು. ಮೈಸೂರು ಮಹಾರಾಜರು ಸಂಸ್ಥಾನಿಕ ಕಾಂಗ್ರೆಸ್ಸಿನ ಕೇಳಿಕೆಗೆ ಪೂರ್ಣ ಬಗ್ಗಿದ್ದಾರೆ. ಮೊದಲು ತಪ್ಪು ವಂಚನೆ ಲೋಚಕರ ಸಲಹೆಗಳಿಗೆ ಸೊಪ್ಪು ಹಾಕಿ ಆದಂತೆ ಪ್ರದರ್ಶಿಸಿದರೂ ಕೊನೆಗೆ ಜನತೆಯು ಮನಸಿಗೆ ಸಂಪೂರ್ಣ ತಜೆಬಾಗಿದ್ದಾರೆ. ಜನ್ಮದ ಜವಾಬ್ದಾರಿ ಸರಕಾರದಿಂದಾಗಿ ಆದರ, ಗೌರವ, ವಿಧೇಯತೆಗಳು ದ್ವಿಗುಣಿತವಾಗದಿರಲಾರವು. ಆದೊಮ್ಮೆ 'ಮಾದರಿಯ ಮೈಸೂರು' ಎಂದು ಸರ್ವತ್ರ ಸಾರಲ್ಪಟ್ಟಿರುವ ಮೈಸೂರು ಮತ್ತೊಮ್ಮೆ ಆ ಅನ್ವರ್ಥ ನಾಮಕ್ಕೆ ಅರ್ಹವೆನಿಸುವ ದಿಶದಾಗಿನಿತಾಡದು ಈದೇ ರೀತಿಯು ವಿವೇಕ ಹೈದರಾಬಾದು ಕಾಶ್ಮೀರಗಳಿಗೆ ಒಂದು ದಾದರೆ ಅವುಗಳಿಗೂ ಮೋಕ್ಷ ಕಟ್ಟಿಟ್ಟದ್ದು. ಅಂತಾಗಲಿ. (ಸ್ವ)

### ಪಾಕೀ ಮಾರ್ಕು

ಪಾಕಿಸ್ತಾನ ಸಂಕಾಂಪು ಹೊಮಿನಿಯನ್ನಿನಲ್ಲಿ ಪೂರಾಟ ಮಾಡಲು ರಹದಾರಿಕೊಡುವ ವಸ್ತುಗಳ ಮೇಲೆ 'ಪಾಕ್‌ಪಾಕ್' ಎಂಬ ಗುರುತನ್ನು ಇನ್ನು ಮೇಲೆ ಉಪಯೋಗಿಸುವುದು.

### ಇದು ಕೊಡೆದು

ಸವದೆಹಲಿ ಅ 28— ಟಿಕೆಟ್ ಇಲ್ಲದೆ ರೈಲ್ವೆ ಪ್ರಯಾಣ ಮಾಡುವುದು ಭಾರತವನ್ನು ನಾಶ ಮಾಡುವುದೆಂದು ಪಾರ್ಲಿಮೆಂಟ್ ಸಭೆಯಲ್ಲಿ ಗಾಂಧೀಜಿ ಹೇಳಿದರು.

# At Opera!
## 2nd Glorious Week
# MAD-MAN
.... with —
**N.S.Krishnan, T A Maduraw**



Edited, Printed and Published by M. S Krishna Rao at the Satyavadi Press Chamaarja Agrahar Mysore.



# Woodlands
## From 31—10—47
ಅಶೋಕಕುಮಾರ್
ವೀರಾ, ಪ್ಯಾರೊ, ಪಾತ್ರವಹಿಸಿರುವ
# ಷಿಕಾರಿ
(ಅವೋಫ ಹಿಂದಿ ಚಿತ್ರ)
ಪ್ರತಿದಿನ 3 ಆಟಗಳು


Office of theMunicipal Engineer
City Municipal Council
Mysore, dated 11—10—47

# NOTIFICATION

Sealed tenders will be received up to 4 p.m. on 3 rd November 1947 by the Municipal Engineer for Flooring inside the Dry Cattle Shed of Municipal Farm.

Each tender must be accompanied with a challan for having remitted Rs. 165 in the Municipal Treasury as earnest money.

For full particulars please see the detailed notification on the notice Board.

S. NARAYANASWAMY
Municipal Engineer


# ಶ್ರೀ 'ಓಂ' ಗುರುತಿನ
## ಅರಿಸಿದ ಪರಿಶುದ್ಧ ಕೇಸರಿ

ಈ ಶ್ರೀ ಓಂ ಗುರುತಿನ ಕೇಸರು ಖುಲ್ ಗ್ಯಾರಂಟಿಯಾಗಿ ಪರಿಶುದ್ಧವಾದುದು. ಸ್ಪೇನ್ ದೇಶದಲ್ಲಿಯೂ ಕೆಸರಿ ಗಿಡಗಳಿಂದ ಅರಿಸಲ್ಪಟ್ಟ ಹೂಗಳಿಂದ ಕಿತ್ತಲ್ಪಟ್ಟು ಅರಿಸಿ ತೆಗೆಯಲ್ಪಟ್ಟಿದಾಗಿದೆ. ಇದರಲ್ಲಿ ಏನೆಂದು ಆಕ್ಷೇಪಣೀಯ ಪದಾರ್ಥವೂ ಸೇರಿಲ್ಲ ಮತ್ತು ಧಾರ್ಮಿಕವಾಗಿಯೂ ಪರಿಶುದ್ಧವಾದುದು. ದೇವಾಲಯಗಳಲ್ಲಿಯೂ ದೇವರ ಪೂಜೆಗೂ ಮತ್ತು ಆಚಾರ ಸಮಾರಂಭಗಳಲ್ಲಿಯೂ ಎಲ್ಲ ಸಂತೋಷ ಮತ್ತು ಸಾಂಘಿಕ ಕೂಟಿಗಳಲ್ಲಿಯೂ ಉಪಯೋಗಿಸಲ್ಪಡಶ್ರೇಷ್ಠವಾಗಿದೆ. ಒಂದು ಔನ್ಸ್ ಪ್ಯಾಕ್ ಮಾಡಲ್ಪಟ್ಟಿದೆ

ವಲ್ಲಭದಾಸ್ ತೇಜ್‌ಪಾಲ್
(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)
ಗೋವಿಂದಪ್ಪ ನಾಯಕ ರಸ್ತೆ, ಜಿ. ಟಿ. ಮದರಾಸು



ವಿಜಯೋತ್ಸವವನ್ನು
ಎಲ್ಲರೂ ವೈಭವದಿಂದ
ಆಚರಿಸಿ

# Woodlands
Morning Shows at 10-30
From 31—10—47 For 7 days
# The Black Panther
— starring —
Frankies Thomas
Frances Robinson
Jack Mulhall
Alseean


## ಪ್ರಜೆಗಳು ಹೀಗಿರಬೇಕಲ್ಲವೇ?

ಕಾರ್ಯಕರ್ತರ ವಿಶೇಷ ಪ್ರಭಾವದ ಫಲಿತವಾಗಿ ಗದ್ವಾಲು ಸಂಸ್ಥಾನದಲ್ಲಿನ ಹನೆಜ್ಞಂದು ಗ್ರಾಮಗಳಲ್ಲಿ ಸೇಂದಿ ಕುಡಿಯುವದನ್ನೇ ನಿಲ್ಲಿಸಿರುವರು. ಯಾರೂ ಕುಡಿಯುತ್ತಿಲ್ಲ. ದಿನಂಪ್ರತಿ ಗಾಡಿಗಳ ಮೇಲೆ ಬರುತ್ತಿರುವ ಸೇಂದಿಯೆಲ್ಲವೂ ವ್ಯರ್ಥವಾಗುತ್ತಿದೆ. ಮದ್ಯಪಾನದ ಒಪಯದಲ್ಲಿ ಜನಂ ದೃಕ್‌ಪಥವು ಬದಲಾವಣೆಯಾದಲ್ಲಿ ದೇಶಕ್ಕೆ ಎಷ್ಟೋ ಲಾಭವಾಗುವದಂಲ್ಲಿ ಸಂದೇಹವಿಲ್ಲ.


# Save the Cow
ಗೋ ವಧೆ ನಿಲ್ಲಲಿ


ಮೈಸೂರು ಸಿಟಿ ಮುನಿಸಿಪಲ್ ಆಫೀಸಿನಿಂದಾ

# ಪ್ರಕಟಣೆ

ಮೈಸೂರು ನಗರದ ಕೆಲವು ಭಾಗಗಳಲ್ಲಿ ಆರೋಗ್ಯ ನಿಯಮಗಳಿಗೆ ವಿರೋಧವಾಗಿ ಮನೆಗಳ ಗೋಡೆಗಳ ಮೇಲೆ ಜನರು ಬೆರಣಿಗಳನ್ನು ತಟ್ಟುತ್ತಿರುವುದು ಕಂಡುಬಂದಿದೆ. ಈ ಅಭ್ಯಾಸವನ್ನು ಕೂಡಲೇ ನಿಲ್ಲಿಸಬೇಕಾಗಿ ಕೋರಿಫೆ ಹಾಗೆ ನಿಲ್ಲಿಸದಿದ್ದಲ್ಲಿ ಮುನಿಸಿಪಲ್ ಬೈಲಾ ೨೧೩೩ ಕಾರ್ಯಕ್ರಮಗಳು ತೆಗೆದುಕೊಳ್ಳಲಾಗುತ್ತೆ.

ಎಸ್. ಎಸ್. ಒರಣ್ಣಯ್ಯ
ಪ್ರೆಸಿಡೆಂಟ್
ಸಿಟಿ ಮುನಿಸಿಪಲ್ ಕೌನ್ಸಿಲ್, ಮೈಸೂರು

ಮೈಸೂರು ಸಿಟಿ ಮುನಿಸಿಪಲ್ ಆಫೀಸಿನಿಂದಾ

# ಪ್ರಕಟಣೆ

ಮೈಸೂರು ನಗರದ ಕೆಲವು ಭಾಗಗಳಲ್ಲಿ ಅಂಡರ್ ಗ್ರೌಂಡ್ ಡ್ರೈನೇಜು ಸೌಲಭ್ಯವಿದ್ದಾಗ್ಯೂ ಸಹಾ ಮನೆಯಲ್ಲಿ ತ್ರಪ್ಪು ಮನೆಯ ಫ್ಲಷಿಂಗ್ ಔಟ್‌ಲೆಟ್ ಕಕ್ಕಸ್ಸುಗಳು ಕಟ್ಟಿಸಿಕೊಳ್ಳುವುದಿಲ್ಲ ಮನೆ ಮಾಲೀಕರುಗಳು ಕೂಡಲೆ ಡ್ರೈನೇಜು ಸೌಲಭ್ಯವಿರುವ ಜರಂಡಿಗಳಲ್ಲಿ ಫ್ಲಷಿಂಗ್ ಕಕ್ಕಸ್ಸುಗಳನ್ನು ಹಗೈಕೆ ಕಟ್ಟಿಸಬೇಕಾಗಿ ಕೋರಿಫೆ. ತಪ್ಪಿದರೆ ಕಾನೂನು ರೀತ್ಯಾ ಹೊಕ್ಕಸಾಧ್ಯ ಕಾರ್ಯಕ್ರಮ ನಡೆಸಲಾಗುತ್ತೆ.

ಎಸ್. ಎಸ್. ಒರಣ್ಣಯ್ಯ
ಪ್ರೆಸಿಡೆಂಟ್
ಸಿಟಿ ಮುನಿಸಿಪಲ್ ಕೌನ್ಸಿಲ್, ಮೈಸೂರು